ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-11-1995.

# *ಬಾಪ್‌ದಾದಾರವರಿಗೆ ವಿಶೇಷವಾಗಿ ಇಷ್ಟವಾದುದು ಮತ್ತು ಜ್ಞಾನಕ್ಕೆ ಬುನಾದಿ - ಪವಿತ್ರತೆ.*

(बापदादा की विशेष पसन्दगी और ज्ञान का फाउण्डेशन - पवित्रता)

ಈ ದಿನ ಪ್ರೇಮ ಸಾಗರರಾದ ಬಾಪ್‌ದಾದಾರವರು ತಮ್ಮ ಪ್ರೇಮ ಸ್ವರೂಪರಾದ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಮಕ್ಕಳೆಲ್ಲರ ಹೃದಯದಲ್ಲಿ ತಂದೆಯ ಪ್ರೀತಿಯು ತುಂಬಿಕೊಂಡಿದೆ. ಪ್ರೀತಿಯು ಎಲ್ಲಾ ಮಕ್ಕಳನ್ನು ದೂರದಿಂದ ಸಮೀಪ ಕರೆತರುತ್ತದೆ. ನೀವು ಭಕ್ತ ಆತ್ಮರಾಗಿದ್ದಾಗ ತಂದೆಯಿಂದ ಎಷ್ಟು ದೂರವಿದ್ದಿರಿ. ಆದ್ದರಿಂದ ನಾಲ್ಕೂ ಕಡೆ ಹುಡುಕಾಡುತ್ತಾ ಅಲೆಯುತ್ತಿದ್ದಿರಿ. ಆದರೆ ಈಗ ಹುಡುಕುತ್ತೀರೇನು? ಎಷ್ಟು ಸಮೀಪವಾಗಿ ಇದ್ದೀರೆಂದರೆ ಮಕ್ಕಳು ಪ್ರತಿಯೊಬ್ಬರು ನಿಶ್ಚಯದಿಂದ. ನಶೆಯಿಂದ ನನ್ನ ತಂದೆಯು ನನ್ನ ಜೊತೆಯಲ್ಲಿದ್ದಾರೆಂದು ಹೇಳುತ್ತೀರಿ. ಜೊತೆಯಲ್ಲಿ ಇದ್ದಾರೆಯೇ ಅಥವಾ ಹುಡುಕಾಡಬೇಕಾಗುತ್ತದೆಯೇ? ಇಲ್ಲಿದ್ದಾರೋ, ಅಲ್ಲಿದ್ದಾರೋ ಎಂದು ಹುಡುಕುತ್ತಿದ್ದೀರಾ? ಎಂದರೆ ಎಷ್ಟು ಸಮೀಪ ಆಗಿಬಿಟ್ಟಿದ್ದೀರಿ. ಪರಮಾತ್ಮನು ಎಲ್ಲಿದ್ದಾರೆಂದು ಯಾರಾದರೂ ಕೇಳಿದರೆ ಏನು ಹೇಳುತ್ತೀರಿ. ನನ್ನ ಜೊತೆಯಲ್ಲಿದ್ದಾರೆಂದು ಹೇಳುತ್ತೀರಲ್ಲವೇ. ಹಿಂದೆ ಕುಳಿತಿರುವವರು ಹೀಗೆ ಹೇಳುತ್ತೀರಾ? ಈಗಂತೂ ತಂದೆಯೂ ಸಹ ನನ್ನನ್ನು ಬಿಟ್ಟಿರಲು ಸಾಧ್ಯವಿಲ್ಲವೆಂದು ನಶೆಯಿಂದ ಹೇಳುತ್ತೀರಿ. ನಿಮ್ಮಿಂದ ಅಗಲಿರಲು ಸಾಧ್ಯವಿದೆಯೇ? ಆದ್ದರಿಂದ ಇಷ್ಟೊಂದು ಸಮೀಪವಾಗಿ ಬಿಟ್ಟಿದ್ದೀರಿ, ಜೊತೆಗಾರರಾಗಿ ಬಿಟ್ಟಿದ್ದೀರಿ. ನೀವೂ ಸಹ ಒಂದು ಸೆಕೆಂಡ್ ಸಹ ತಂದೆಯಿಂದ ಅಗಲಿರಲು ಸಾಧ್ಯವಿದೆಯೆ? ಅಗಲಿರಲು ಸಾಧ್ಯವಿಲ್ಲ. ಆದರೆ ಯಾವಾಗ ಮಾಯೆಯು ಆವರಿಸಿರುತ್ತದೆಯೋ ಆಗ? ಆಗ ಯಾರು ಜೊತೆಯಲ್ಲಿರುತ್ತಾರೆ? ಆ ಸಮಯದಲ್ಲಿ ಒಂದು ವೇಳೆ ತಂದೆಯು ಜೊತೆಯಲ್ಲಿದ್ದರೆ ಮಾಯೆಯು ಬರಲು ಸಾಧ್ಯವಾಗುತ್ತದೆಯೇ? ಹೀಗೆ ಮಧ್ಯೆ ಮಧ್ಯೆ ತಂದೆಯೊಂದಿಗೂ ಮಕ್ಕಳು ಅಗಲಿರಲು ಬಯಸುವುದಿಲ್ಲ. ಆದರೆ ಬಯಸದಿದ್ದರೂ ಸಹ ಕಣ್ಣಾಮುಚ್ಚಾಲೆ ಆಟ ಆಡಿಬಿಡುತ್ತೀರಿ. ತಂದೆಯನ್ನು ನೋಡುವ ದೃಷ್ಟಿಯು ಕಾಣೆಯಾಗಿ ಬಿಡುತ್ತದೆ ಹಾಗೂ ಮಾಯೆಯನ್ನು ನೋಡುವ ದೃಷ್ಟಿಯು ತೆರೆದು ಬಿಡುತ್ತದೆ. ಆದ್ದರಿಂದ ಆಗಾಗ ಕಣ್ಣಾಮುಚ್ಚಾಲೆ ಆಟ ಆಡುತ್ತೀರಾ? ಒಮ್ಮೊಮ್ಮೆ ಆಡುತ್ತೀರಾ? ಇದರಲ್ಲಿ ಇಲ್ಲವೆಂದು ಹೇಳಲಿಲ್ಲ ಆಡುವುದಿಲ್ಲವೇ. ಆದರೆ ತಂದೆಯು ಎಷ್ಟೇ ಆದರೂ ಮಕ್ಕಳ ಮೇಲೆ ದಯಾಹೃದಯಿಯಾಗಿ ಮಾಯೆಯಿಂದ ಯಾವುದೋ ಒಂದು ರೀತಿಯಿಂದ ದೂರ ಮಾಡಿ ಬಿಡುತ್ತಾರೆ. ಮಾಯೆಯು ಮೂರ್ಛಿತರನ್ನಾಗಿ ಮಾಡುತ್ತದೆ. ತಂದೆಯು ಪ್ರಜ್ಞಾವಂತರನ್ನಾಗಿ ಮಾಡುತ್ತಾರೆ. ನೀವು ನನ್ನವರಾಗಿದ್ದೀರಿ ಎನ್ನುವ ಪ್ರಜ್ಞೆಯನ್ನು ತಂದು ಕೊಡುತ್ತಾರೆ. ಮುಚ್ಚಿಹೋಗಿದ್ದ ಕಣ್ಣನ್ನು ಸ್ಮೃತಿ ಎಂಬ ಜಾದುವಿನಿಂದ ತೆರೆದು ಬಿಡುತ್ತಿದ್ದಾರೆ. ಆದರೆ, ಒಂದು ಕಡೆ ನನ್ನ ತಂದೆ ನನ್ನ ತಂದೆ ಎಂದು ಹೇಳುತ್ತಾ ಇರುತ್ತಾರೆ. ಇನ್ನೊಂದು ಕಡೆ ದೂರ ಸರಿದು ಬಿಡುತ್ತಾರೆ. ಒಂದು

ವೇಳೆ ಈಗ ಇಲ್ಲಿ ಹೀಗೆ ದೂರ ಸರಿದರೆ ನಿಮ್ಮನ್ನು ನೋಡಲು ಸಾಧ್ಯವಾಗುತ್ತದೆ ಏನು? ಇಲ್ಲಾ ತಾನೆ. ಹೀಗೆ ಮಾಡುತ್ತೀರಿ. ಮಾಯೆಯ ಕಡೆ ಹೀಗೆ ಮುಖ ತಿರುಗಿಸಿ ಬಿಡುತ್ತೀರಿ. ಹೀಗೆ ಬಾಪ್‌ದಾದಾರವರು ಸಹ ಮಕ್ಕಳ ಈ ಲೀಲೆಯನ್ನು ನೋಡುತ್ತಾ ಇರುತ್ತೇವೆ.

ಎಲ್ಲರ ಪ್ರೀತಿಯು ಎಷ್ಟು ಶಾತವಿದೆ ಎಂದು ಬಾಪ್‌ದಾದಾರವರು ಕೇಳಿದರೆ ಎಲ್ಲರೂ ಏನು ಹೇಳುತ್ತಾರೆ? ಶೇಕಡಾ 100ಕ್ಕಿಂತಲೂ ಜಾಸ್ತಿ ಇದೆ ಎಂದು ಹೇಳುತ್ತಾರೆ. ಇದೆಯೇನು? ಅಥವಾ ಕೇವಲ ಚಪ್ಪಾಳೆ ತಟ್ಟಿಬಿಟ್ಟಿರೋ? ಶೇಕಡಾ 100% ಗಿಂತಲೂ ಹೆಚ್ಚಿಗೆ ಇದೆ. ಪದಮದಷ್ಟು ಪ್ರೀತಿಯಿದೆ ಎಂದು ಹೇಳುತ್ತೀರಿ. ಹೇಳುತ್ತೀರಾ? ಒಳ್ಳೆಯದು, ಯಾರ ಪ್ರೀತಿಯು ಕಡಿಮೆ ಇದೆಯೊ, ಪದಮಕ್ಕಿಂತಲೂ ಕಡಿಮೆಯಿದೆಯೋ, ಕೋಟಿಯಷ್ಟಿದೆಯೋ, ಲಕ್ಷದಷ್ಟಿದೆಯೋ, ಸಾವಿರದಷ್ಟಿದೆಯೋ, ನೂರರಷ್ಟಿದೆಯೋ, ಹೀಗೆ ಪದಮದಷ್ಟಕ್ಕಿಂತಲೂ ಕಡಿಮೆ ಇದ್ದರೆ ಅವರು ಕೈ ಎತ್ತಿರಿ. ಕಡಿಮೆ ಇರುವವರು ಕೈಯೆತ್ತಿರಿ (ಯಾರು ಕೈಯನ್ನು ಎತ್ತಲಿಲ್ಲ) ಒಳ್ಳೆಯದು. ಎಲ್ಲರೂ ಪಕ್ಕಾ ಆಗಿದ್ದೀರಿ. ಬಾಪ್ ದಾದಾರವರು ಇನ್ನೊಂದು ಪ್ರಶ್ನೆ ಕೇಳುತ್ತಾರೆ ಆಗ ಬದಲಾಗಬಾರದು. ಒಳ್ಳೆಯದು. ಪದಮದಷ್ಟು ಪ್ರೀತಿಯು ಇದ್ದೇ ಇದೆಯೆಂದು ಯಾರು ಹೇಳುತ್ತೀರೋ ಅವರು ಕೈ ಎತ್ತಿರಿ. ನೋಡಿರಿ, ಪದಮದಷ್ಟು ಇದೆಯೆಂದು ಹೇಳುತ್ತಿದ್ದೀರಿ. ಒಳ್ಳೆಯದು ಪದಮದಷ್ಟಿದೆಯೇ - ಡಬಲ್ ವಿದೇಶಿಯರು ಹೇಳಿರಿ ದಶಲಕ್ಷದಷ್ಟು ಇದೆಯೇ ಇದು ಪಕ್ಕಾ ಆಗಿದೆಯಲ್ಲವೇ. ಆಮೇಲೆ ಬದಲಾಯಿಸಬೇಡಿರಿ. ಯಾರು ಜೊತೆಯಲ್ಲಿ ಕೈ ಎತ್ತಿಲ್ಲವೋ ಹಾಗೂ ನೋಡಿದ್ದಾರೋ ಅವರು ನಾಚಿಕೆಯಿಂದ ಎತ್ತುವುದಿಲ್ಲ. ಅಂತಹವರು ಯಾರಾದರೂ ಇದ್ದೀರಾ? ಒಳ್ಳೆಯದು - ಈಗ ನೋಡಿರಿ. ಒಳ್ಳೆಯದು ಕೆಳಗೆ ಕುಳಿತಿರುವವರೂ ಕೈ ಎತ್ತುತ್ತಾ ಇದ್ದಾರೆ. ಕೆಳಗಡೆ ಮಧುಬನದವರು ಇರುವವರು. ಆದ್ದರಿಂದ ಮಧುಬನದವರು ಹೇಳಿರಿ. ಪದಮದಷ್ಟು ಪ್ರೀತಿಯಿದೆಯೇ, ಹೌದು ಇದೆ ಎಂದು ಹೇಳುತ್ತಾ ಇದ್ದಾರೆ. ಜ್ಞಾನ ಸರೋವರದವರದು ಪದಮದಷ್ಟು ಇದೆಯೇ? ಒಳ್ಳೆಯದು ಇದಂತೂ ತುಂಬಾ ಸಂತೋಷದ ಸಮಾಚಾರವನ್ನು ಹೇಳಿದಿರಿ. ಪದಮದಷ್ಟು ಪ್ರೀತಿಯಿದೆಯೆಂದು.

ಪ್ರೀತಿಯ ಪ್ರಮಾಣ ಏನಿರುತ್ತದೆಯೆಂದು ಈಗ ತಂದೆಯು ಕೇಳುತ್ತಿದ್ದಾರೆ, ಸಮಾನರಾಗುವುದು. ಹಾಗಾದರೆ ಸಮಾನ ಆಗಿದ್ದೀರಾ? (ಇಲ್ಲ) ಹಾಗಾದರೆ ಪದಮಕ್ಕಿಂತಲೂ ಕಡಿಮೆಯಾಗಿ ಬಿಟ್ಟಿತು. ಹೋಗಲಿ ಬಿಡಿ ನೀವೆಲ್ಲರೂ ಏನು ಹೇಳುತ್ತೀರೆಂದರೆ, ಸಂಪೂರ್ಣ ಆಗುವುದರಲ್ಲಿ ಇನ್ನೂ ಸ್ವಲ್ಪ ಸಮಯಾವಕಾಶ ಇದೆ ಎಂದು. ಆದ್ದರಿಂದ ಅಷ್ಟರಲ್ಲಿ ಸಂಪೂರ್ಣ ಆಗಿ ಬಿಡುವೆವು - ಹಾಗೆ ತಿಳಿದಿದ್ದೀರೇನು, ಆದರೆ ಪ್ರೀತಿಯ ಸಲುವಾಗಿ ಯಾರಾದರೂ ಒಂದುವೇಳೆ ತಮಗೆ ಪ್ರಿಯರಾದವರು ನೀನು ಪ್ರಾಣವನ್ನು ಬಲಿಕೊಟ್ಟು ಬಿಡು ಎಂದು ಹೇಳಿದರೆ ಅದಕ್ಕೂ ತಯಾರಾಗಿರುತ್ತಾರೆ. ಪ್ರೀತಿಯ ಸಲುವಾಗಿ ಪ್ರಾಣವನ್ನು ಅರ್ಪಣೆ ಮಾಡಲು ತಯಾರಾಗಿರುತ್ತಾರೆ. ತಯಾರಾಗಿರುತ್ತಾರೇನು? ಆದರೆ ಬಾಪ್‌ದಾದಾರವರು ಪ್ರಾಣವನ್ನಂತೂ ತೆಗೆದುಕೊಳ್ಳುವುದಿಲ್ಲ ಏಕೆಂದರೆ ಪ್ರಾಣದಿಂದ ಸೇವೆ ಮಾಡಬೇಕಾಗಿದೆ. ಆದರೆ ಒಂದು ವಿಚಾರದ ಬಗ್ಗೆ ಬಾಪ್‌ದಾದಾರವರು ಸ್ವಲ್ಪ ಸಮಯದವರೆಗೆ ಅಶ್ಚರ್ಯ ಪಡಬೇಕಾಗುತ್ತದೆ. ವಾಸ್ತವವಾಗಿ ಆಶ್ಚರ್ಯಪಡಬಾರದು ಹಾಗೆಂದು ನಿಮಗೂ ಹೇಳುತ್ತೇವೆ. ಆದರೆ ಬಾಪ್‌ದಾದಾರವರು ಆಶ್ಚರ್ಯಪಡಬೇಕಾಗುತ್ತದೆ. ಅಂತಹ ಪಾತ್ರವನ್ನು ಅಭಿನಯಿಸುತ್ತಿದ್ದೀರಿ. ಪ್ರಾಣವನ್ನು ಅರ್ಪಣೆ ಮಾಡುವುದನ್ನು ಬಿಡಿ. ಆದರೆ ಪ್ರೀತಿಯ ಗುರುತು ತ್ಯಾಗ ಮಾಡುವುದು ಆಗಿದೆ. ಏನು ಹೇಳಿದರೆ

ಅದನ್ನು ಮಾಡುವುದನ್ನೇ ಸಮರ್ಪಣೆ ಆಗುವುದು ಬಲಿಯಾಗುವುದೆಂದು ಹೇಳಲಾಗುತ್ತದೆ. ಆದ್ದರಿಂದ ತಂದೆಯು ಕೇವಲ ಒಂದು ವಿಷಯದಲ್ಲಿ ಸಮರ್ಪಣೆ ಆಗುವುದನ್ನು ನೋಡಲು ಬಯಸುತ್ತೇವೆ. ಸಮರ್ಪಣೆ ಅಥವಾ ತ್ಯಾಗ ಮಾಡಬೇಕಾದ ವಿಚಾರಗಳು ಅನೇಕ ಇವೆ. ಆದರೆ ತಂದೆಯು ಅನೇಕ ವಿಚಾರಗಳನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಕೇವಲ ಒಂದು ವಿಷಯದಲ್ಲಿ ಬಲಿಹಾರಿಯಾಗಬೇಕು. ಅದಕ್ಕಾಗಿ ಕೈಯನ್ನು ಎತ್ತಿರಿ ಎಂದು ಹೇಳುತ್ತಿದ್ದಾರೆ. ಪ್ರತಿಜ್ಞೆ ಕೂಡ ಮಾಡುತ್ತಿದ್ದೀರಿ ಆದರೆ ಮತ್ತೆ ಅದೇ ಮಾಡುತ್ತಿದ್ದೀರಿ. ಅದು ಏನು? ಮಾತು ಮಾತಿಗೆ ತಂದೆಯಿಂದ ಬೇರೆಯಾಗಲು ಮುಖ್ಯ ಸಂಸ್ಕಾರ ಅಥವಾ ಮುಖ್ಯ ಬಲಹೀನತೆ ಏನು ಎಂಬುದು ಪ್ರತಿಯೊಬ್ಬರಿಗೆ ತಿಳಿದಿದೆಯಲ್ಲವೇ? ಪ್ರತಿಯೊಬ್ಬರೂ ತಮ್ಮ ಮುಖ್ಯ ಬಲಹೀನತೆಯನ್ನು ತಿಳಿದಿದ್ದೀರಲ್ಲವೇ? **ಇದರಲ್ಲಿ ಹೌದು ಎಂದು ಹೇಳುವುದಿಲ್ಲ. ಏಕೆಂದರೆ ಸಿಕ್ಕಿ ಬೀಳುತ್ತೀರಿ. ಆದ್ದರಿಂದ ಪಾಂಡವರು ತಿಳಿದುಕೊಂಡಿದ್ದೀರಾ. ಹಿಂದೆ ಕುಳಿತುಕೊಂಡಿರುವವರು ತಿಳಿದುಕೊಂಡಿದ್ದೀರಾ? ಮಾತೆಯರು ತಿಳಿದುಕೊಂಡಿದ್ದೀರಾ? ಅಥವಾ ವಿದ್ಯಾರ್ಥಿಗಳು ತಿಳಿದುಕೊಂಡಿದ್ದಾರೆ. ಶಿಕ್ಷಕಿಯರು ತಿಳಿದುಕೊಂಡಿಲ್ಲವೋ? ಇದರಲ್ಲಿ ಜ್ಞಾನಪೂರ್ಣರು ವಿದ್ಯಾರ್ಥಿಗಳಾಗಿದ್ದಾರೆ ಹಾಗೂ ಇದರಲ್ಲಿ ನೀವು ಜ್ಞಾನ ಪೂರ್ಣರಾಗಿಲ್ಲವೆಂದು ಹೇಳುವುದಿಲ್ಲ ತಾನೇ, ನೀವೂ ತಿಳಿದುಕೊಂಡಿದ್ದೀರಾ? ಶಿಕ್ಷಕಿಯರೆಲ್ಲರೂ ಮುಂದುಗಡೆ ಕುಳಿತುಕೊಂಡಿದ್ದಾರೆ. ತಿಳಿದುಕೊಂಡಿದ್ದೀರಾ? ಚೆನ್ನಾಗಿ ತಿಳಿದುಕೊಂಡಿದ್ದೀರಾ? ನೋಡುತ್ತಿದ್ದೇವೆ. ಎಲ್ಲರೂ ಹೌದೆಂದು ಹೇಳುತ್ತಿದ್ದಾರೆ.** ಆ ಬಲಹೀನತೆ ಏನು ಎಂದು ತಿಳಿದುಕೊಂಡ ಮೇಲೆಯೂ ಏಕೆ ಬಲಿಹಾರವಾಗುತ್ತಿಲ್ಲ? 63 ಜನ್ಮಗಳಿಂದ ಜೊತೆ ಇದೆ ಅಲ್ಲವೇ ಅದಕ್ಕಾಗಿ ಅದರೊಂದಿಗೆ ಪ್ರೀತಿ ಇದೆಯೇ?

ಪ್ರೀತಿಯ ಅರ್ಥವೇನಾಗಿದೆಯೆಂದರೆ ತಮಗೆ ಪ್ರಿಯರಾದವರು ಏನು ಬಯಸುತ್ತಾರೋ ಅದನ್ನು ಮಾಡಿಬಿಡುವುದು. ಹೀಗೆ ಮಾಡಲು ಆಗುತ್ತದೆಯೇನು? ಅಥವಾ ಆಗುವುದಿಲ್ಲವೋ? ಒಂದುವೇಳೆ ಪ್ರೀತಿ ಮಾಡುವವರು ಒಂದು ಮಾತು ಹೇಳಿದರೆ, ಇನ್ನೊಬ್ಬರು ಅದನ್ನು ಮಾಡದಿದ್ದರೆ ಬೇರೆ ಏನಾದರೂ ಮಾಡಿದರೆ ಪರಿಣಾಮವು ಏನಾಗಿ ಬಿಡುತ್ತದೆ? ಪ್ರೀತಿ ಆಗುತ್ತದೆಯೋ ಅಥವಾ ಜಗಳವಾಗುತ್ತದೆಯೋ? ಆ ಸಮಯದಲ್ಲಿ ಪ್ರೀತಿಯಿದೆಯೆಂದು ಹೇಳಬಹುದೇನು? ಅಥವಾ ಒಬ್ಬರಿನ್ನೊಬ್ಬರೊಂದಿಗೆ ಹೊಡೆದಾಡುತ್ತಾರೋ, ಹಾಗೆಯೇ ತಂದೆಗೆ ಏನು ಪ್ರಿಯವಾಗಿದೆ? ಬಾಪ್‌ದಾದಾರವರು ಹೇಳುವುದೇನೆಂದರೆ ಸಮಾನ ಆಗುವುದರಲ್ಲಿ ಅನೇಕ ವಿಚಾರಗಳಿವೆ. ಬ್ರಹ್ಮಾಬಾಬಾರವರ ವಿಶೇಷತೆಗಳನ್ನು ನೋಡಿರಿ ಹಾಗೂ ಬ್ರಹ್ಮಾಬಾಬಾರವರ ಸಮಾನರೇ ಆಗಬೇಕಾಗಿದ್ದರೆ ಎಷ್ಟೊಂದು ವಿಶೇಷತೆಗಳ ದೊಡ್ಡ ಪಟ್ಟಿಯಿದೆ. ಪಟ್ಟಿಯಿದೆಯಲ್ಲವೇ. ಬಾಪ್‌ದಾದಾರವರು ಅದನ್ನು ಪರಿಗಣಿಸುವುದಿಲ್ಲ. ಹೋಗಲಿ ಬಿಡಿ ಎಂದು ಹೇಳುತ್ತೇವೆ. ಒಂದೆರಡು ವಿಶೇಷತೆಗಳು ಕಡಿಮೆಯಿದ್ದರೂ ಅಡ್ಡಿಯಿಲ್ಲ. ಆದರೆ ಏನು ಮೂಲ ತಳಪಾಯ(ಬುನಾದಿ)ಯಿದೆಯೋ ಏನು ಬ್ರಹ್ಮಾಬಾಬಾರವರ ಅಥವಾ ಜ್ಞಾನದ ಆಧಾರವಾಗಿದೆಯೋ ಅದು ಏನಾಗಿದೆ? ಅನ್ಯ ದೊಡ್ಡ ಪಟ್ಟಿಯನ್ನು ಈಗ ಬಿಟ್ಟುಬಿಡಿ. ಈಗ ಕೇವಲ ಒಂದು ವಿಶೇಷತೆ - ಜ್ಞಾನದ ಬುನಾದಿ(ತಳಪಾಯ) ಅಥವಾ ಬ್ರಹ್ಮಾಬಾಬಾ & ಶಿವಬಾಬಾರವರಿಗೆ ವಿಶೇಷವಾಗಿ ಇಷ್ಟವಾಗಿರುವುದು ಏನಾಗಿದೆ? ಹೇಳಿರಿ. (ಪವಿತ್ರತೆ, ಅಂತರ್ಮುಖತೆ, ನಿಶ್ಚಯಬುದ್ಧಿ, ಸತ್ಯತೆ - ಸ್ವಚ್ಛತೆ) ದಾದಿಯರು ಹೇಳಿರಿ. (ಸಮರ್ಪಣೆ) ಸಮರ್ಪಣೆಯಲ್ಲಿಯಂತೂ ಎಲ್ಲಾ ವಿಚಾರಗಳೂ ಬಂದು ಬಿಡುತ್ತದೆ. ಇಷ್ಟು ದೊಡ್ಡ ವಿಚಾರವನ್ನು ಹೇಳಿಬಿಟ್ಟಿರಿ. ಇಷ್ಟೊಂದು ಇವರಿಂದ ಮಾಡಿಸಬೇಡಿರಿ ಏಕೆಂದರೆ ಸ್ವಯಂ ಸಮರ್ಪಣೆಯಾಗಿ ಬಿಟ್ಟಿದ್ದೀರಿ.

ಆದ್ದರಿಂದ ಅನ್ಯರೂ ಹಾಗೆ ಆಗಿಬಿಡಲಿ ಎಂದು ಭಾವಿಸುತ್ತೀರಿ. ಸಮರ್ಪಣೆ ಆಗುವುದೇನೋ ಒಳ್ಳೆಯದೇ ಆಗಿದೆ. ವಾಸ್ತವವಾಗಿ ಬುನಾದಿಯು ಪವಿತ್ರತೆಯಾಗಿದೆ. ಆದರೆ ಪವಿತ್ರತೆಯ ಪರಿಭಾಷೆಯು ತುಂಬಾ ಗುಹ್ಯವಾಗಿದೆ. ಎಲ್ಲಿ ಪವಿತ್ರತೆಯು ಇರುತ್ತದೆಯೋ ಅಲ್ಲಿ ನೀವೆಲ್ಲರೂ ಏನೇನು ಹೇಳಿದಿರೋ ನಿಶ್ಚಯ, ಸತ್ಯತೆ, ಸ್ವಚ್ಛತೆ. ಇವೆಲ್ಲವೂ ಬಂದು ಬಿಡುತ್ತಿವೆ. ಆದರೆ ಬಾಪ್‌ದಾದಾರವರು ಏನು ನೋಡುತ್ತಿದ್ದಾರೆ ಪವಿತ್ರತೆಯ ಗುಹ್ಯ ಭಾಷೆ. ಪವಿತ್ರತೆಯ ಗುಹ್ಯ ರಹಸ್ಯವು ಇನ್ನೂ ಬುದ್ಧಿಯಲ್ಲಿ ಪೂರ್ತಿ ಸ್ಪಷ್ಟವಾಗಿ ಧಾರಣೆಯಾಗಿಲ್ಲ. ವ್ಯರ್ಥ ಸಂಕಲ್ಪವು ನಡೆಯುವುದು ಅಥವಾ ನಡೆಸುವುದರಿಂದ ತಮ್ಮ ಅಂತರ್ಯದಲ್ಲಿಯೂ ನಡೆಯುತ್ತದೆ. ಹಾಗೂ ಅನ್ಯರಿಗೂ ವ್ಯರ್ಥ ಸಂಕಲ್ಪ ಬರಲು ನಿಮಿತ್ತರಾಗುತ್ತಿದ್ದೀರಿ. ವ್ಯರ್ಥ ಸಂಕಲ್ಪವು ಪವಿತ್ರತೆಯಾಗಿದೆಯೇ? ಆದ್ದರಿಂದ ಸಂಕಲ್ಪದ ಪವಿತ್ರತೆಯ ರಹಸ್ಯವನ್ನು ಎಲ್ಲರೂ ಪ್ರತ್ಯಕ್ಷದಲ್ಲಿ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕಲ್ಲವೇ? ಸಾಮಾನ್ಯವಾಗಿ ನೋಡಿದರೆ ಪಂಚವಿಕಾರಗಳು ಕಾಮವೇ ಆಗಿರಲಿ, ಮೋಹವೇ ಆಗಿರಲಿ, (ಎಲ್ಲಕ್ಕಿಂತಲೂ ಮೊದಲು ಕಾಮವಾಗಿದೆ ಹಾಗೂ ಕೊನೆಯ ವಿಕಾರವೂ ಮೋಹವಾಗಿದೆ) ಆದರೆ ಒಂದುವೇಳೆ ನೀವು ವಿಚಾರ ಮಾಡಿದರೆ ಯಾವುದೇ ವಿಕಾರವು ಬಂದಾಗ ಮೊದಲು ಎಲ್ಲಿ ಬರುತ್ತದೆ? ಸಂಕಲ್ಪದಲ್ಲಿ ಬರುತ್ತದೆಯಲ್ಲವೇ? ಅಥವಾ ಕರ್ಮದಲ್ಲಿ ಬರುತ್ತದೆಯೋ, ಮೊದಲು ಸಂಕಲ್ಪದಲ್ಲಿ ಬರುತ್ತದೆ ಹಾಗೂ ಆ ಸಂಕಲ್ಪವನ್ನು ವ್ಯರ್ಥ ಸಂಕಲ್ಪವೆಂದು ಕರೆಯುವುದಿಲ್ಲವೇ? ಕರೆಯುತ್ತೇವೆ. ಹಾಗೆಯೇ ವ್ಯರ್ಥ ಸಂಕಲ್ಪವು ಕ್ರೋಧವನ್ನು ಉತ್ಪನ್ನ ಮಾಡುತ್ತದೆ ಕಾಮ ಅರ್ಥಾತ್ ವ್ಯರ್ಥ ದೃಷ್ಟಿ. ಯಾವುದೇ ಆತ್ಮನ ಕಡೆಗೆ ಒಂದು ವೇಳೆ ವ್ಯರ್ಥ ದೃಷ್ಟಿ ಆದರೂ ಹೋದರೆ ಆ ಸಮಯದಲ್ಲಿ ಪವಿತ್ರತೆ ಇದೆಯೆಂದು ಹೇಳಬಹುದೇ? ಪವಿತ್ರತೆಯೆಂದು ಭಾವಿಸಲ್ಪಡುವುದಿಲ್ಲ. ಆದ್ದರಿಂದ ವ್ಯರ್ಥ ಸಂಕಲ್ಪವನ್ನು ತಂದೆಯ ಪ್ರೀತಿಯ ಸಲುವಾಗಿ ತ್ಯಾಗ ಮಾಡುವುದಿಲ್ಲ? ತ್ಯಾಗ ಮಾಡಬಲ್ಲಿರಾ? ಆಗಲಿ ಬಾಬಾ ಎಂದು ಹೇಳುವುದು ತುಂಬಾ ಸಹಜವಾಗಿದೆ. ಆದರೆ ಬಾಪ್‌ದಾದಾರವರ ಬಳಿಯಂತೂ ಎಲ್ಲರ ಚಾರ್ಟ್ ಇರುತ್ತದೆಯಲ್ಲವೇ. ಇನ್ನೂ ಪಂಚವಿಕಾರಗಳ ವ್ಯರ್ಥಸಂಕಲ್ಪಗಳು ಮೆಜಾರಿಟಿ (ಅಧಿಕ ಸಂಖ್ಯೆ) ಮಕ್ಕಳಲ್ಲಿ ನಡೆಯುತ್ತದೆ. ಅದು ಯಾವ ವಿಕಾರವಾದರೂ ಆಗಿರಬಹುದು. ಇದು ಏಕೆ. ಇದೇನು, ಹೀಗೆ ಆಗಬಾರದು. ಹೀಗೆ ಆಗಬೇಕು ಅಥವಾ ಸಾಮಾನ್ಯವಾದ ಸಂಗತಿಯನ್ನು ಬಾಪ್‌ದಾದಾರವರು ಏನು ಹೇಳಿದ್ದಾರೆ, ಜ್ಞಾನಿ ಆತ್ಮರಲ್ಲಿ ತಮ್ಮ ಗುಣದ ಬಗ್ಗೆಯಾಗಲಿ, ತಮ್ಮ ವಿಶೇಷತೆಯ ಬಗ್ಗೆಯಾಗಲಿ ಅಭಿಮಾನವು ಉತ್ಪನ್ನವಾಗುತ್ತದೆ. ಎಷ್ಟು ಮುನ್ನಡೆಯುತ್ತಾರೋ, ಪ್ರಗತಿ ಹೊಂದುತ್ತಾರೋ ಅಷ್ಟು ತಮ್ಮ ಯಾವುದಾದರೂ ವಿಷಯದಲ್ಲಿ ಲೋಪವನ್ನು ನೋಡಿಕೊಂಡು (ಅ ಕಡಿಮೆಯು ತಮ್ಮ ಪುರುಷಾರ್ಥದಲ್ಲಿಲ್ಲ) ಅದು ತಮ್ಮ ಪ್ರಖ್ಯಾತಿಯಲ್ಲಿ, ಸನ್ಮಾನದಲ್ಲಿ, ಪ್ರತಿಷ್ಠೆಯಲ್ಲಿ, ತಮ್ಮಿಂದ ಯಾವುದಾದರೂ ಕಾರ್ಯದ ಬಗ್ಗೆ ಸಲಹೆ ಕೇಳುವುದರಲ್ಲಿ, ತಮ್ಮನ್ನು ಮುಂದೆ ಇಡುವುದರಲ್ಲಿ, ತಮ್ಮನ್ನು ಸೇವಾ ಕೇಂದ್ರದ ಇನ್‌ಚಾರ್ಜ್ ಮಾಡುವುದರಲ್ಲಿ, ಸೇವೆಯಲ್ಲಿ ವಿಶೇಷ ಪಾತ್ರವನ್ನು ತಮಗೆ ನೀಡುವುದರಲ್ಲಿ ಲೋಪವನ್ನು ನೋಡುತ್ತಿದ್ದಾರೆ ಎಂದು ತಿಳಿದು ವ್ಯರ್ಥ ಸಂಕಲ್ಪ ಮಾಡುವುದು ಸಹ ವಿಶೇಷವಾಗಿ ಜ್ಞಾನಿ ಆತ್ಮರಿಗೆ ತುಂಬಾ ನಷ್ಟವನ್ನುಂಟು ಮಾಡುತ್ತದೆ ಹಾಗೂ ಈಗಿನ ಸಮಯದಲ್ಲಿ ಈ ಎರಡೇ ವಿಶೇಷವಾಗಿ ವ್ಯರ್ಥ ಸಂಕಲ್ಪದ ಆಧಾರವಾಗಿವೆ. ನೀವು ಒಂದು ದಿನದ ನಿಮ್ಮ ದಿನಚರಿಯನ್ನು ಗಮನಿಸಿರಿ. ಈಗಂತೂ ಮಧುಬನದಲ್ಲಿ ಇದ್ದೀರಲ್ಲವೇ. ಆದ್ದರಿಂದ ಮಧುಬನದಲ್ಲಂತೂ ಯಾವುದೂ ಇಂತಹ ಘಟನೆಯೂ ಆಗುವುದಿಲ್ಲ. ಆದರೆ ಯಾವಾಗ ಸೇವೆ ಮಾಡಲು ಹೋಗುತ್ತೀರೋ ಆಗ ಒಂದು ದಿನದಲ್ಲಿ ಇವೆರಡರಲ್ಲಿ ಅಭಿಮಾನ ಅಥವಾ ಅಪಮಾನ, ನನಗೆ ಏಕೆ ಕಡಿಮೆ ಮನ್ನಣೆ

ದೊರೆಯುತ್ತದೆ. ನನಗೂ ಈ ಪದವಿ ದೊರೆಯಬೇಕು, ನನ್ನನ್ನೂ ಸಹ ಮುಂದಿಡಬೇಕು ಎಂದು ಏನು ಮನಸ್ಸಿನಲ್ಲಿ ಬರುತ್ತದೆಯೋ ಇದನ್ನು ಅಭಿಮಾನವೆಂದು ತಿಳಿದುಕೊಂಡಿದ್ದೀರಲ್ಲವೇ. ಹೀಗೆ ಈ ಎರಡು ಅಂಶಗಳೇ ಅಭಿಮಾನ ಹಾಗೂ ಅಪಮಾನ. ಈಗಿನ ಸಮಯದಲ್ಲಿ ವ್ಯರ್ಥ ಸಂಕಲ್ಪದ ಕಾರಣಗಳಾಗಿವೆ. ಇವೆರಡನ್ನೂ ಒಂದು ವೇಳೆ ತ್ಯಾಗ ಮಾಡಿಬಿಟ್ಟರೆ ತಂದೆಯ ಸಮಾನ ಆಗುವುದೇನು ಕಷ್ಟವಲ್ಲ. ಹಾಗಾದರೆ ತ್ಯಾಗ ಮಾಡುವ ಶಕ್ತಿಯಿದೆಯೇ? ಒಳ್ಳೆಯದು, ಎಷ್ಟು ಸಮಯದಲ್ಲಿ ತ್ಯಾಗ ಮಾಡುವಿರಿ. ಈಗಂತೂ 6 ತಿಂಗಳವರೆಗೆ ಮಿಲನದ ಸೀಜನ್ ಇದೆ. ಒಂದು ತಿಂಗಳಿನ ನಂತರ ಇನ್ನೊಂದು ತಿಂಗಳ ಸಮಯ ಕೊಡುತ್ತಿದ್ದೇವೆ. ಈಗ ನವೆಂಬರ್ ನಡೆಯುತ್ತಿದೆಯಲ್ಲವೇ. ಹೊಸ ವರ್ಷವು ಬಂದರೆ 2 ತಿಂಗಳಾಗಿ ಬಿಡುತ್ತದೆಯಲ್ಲವೇ. ಹೊಸ ವರ್ಷದಲ್ಲಿ ಸಾಮಾನ್ಯವಾಗಿ ಹೊಸ ಖಾತೆಯನ್ನು ಪ್ರಾರಂಭ ಮಾಡುತ್ತಾರೆ. ಆದ್ದರಿಂದ ಪ್ರತಿಯೊಬ್ಬರು ಶಿಕ್ಷಕರಾಗಲಿ, ವಿದ್ಯಾರ್ಥಿಯಾಗಲಿ, ಮಹಾರಥಿಯಾಗಲಿ, ಕಾಲ್ದಳದವರಾಗಲಿ, ಪ್ರತಿಯೊಬ್ಬರದು ಹೊಸ ಖಾತೆಯಾಗಬೇಕು. ಇದಂತೂ ಮಹಾರಥಿಗಳ ಸಲುವಾಗಿ ನಿರ್ದೇಶನ ಕೊಡಲ್ಪಡುತ್ತಿದೆ. ನಾನಂತೂ ಸಣ್ಣವನಾಗಿದ್ದೇನೆ ಎಂದು ತಿಳಿಯಬಾರದು. ರಾಜ್ಯಭಾಗ್ಯವನ್ನು ತೆಗೆದುಕೊಳ್ಳುವ ಸಮಯದಲ್ಲಿಯಂತೂ ನಾನು ಸಣ್ಣವನಾಗಿದ್ದೇನೆ ಎಂದು ಯಾರು ಹೇಳುವುದಿಲ್ಲ. ಆ ಸಮಯದಲ್ಲಿ ಎರಡನೆಯ ನಾರಾಯಣನನ್ನಾಗಿ ಮಾಡಿಬಿಡಿ ಎಂದು ಸಣ್ಣವರೂ ಹೇಳುತ್ತಾರೆ. ಆದ್ದರಿಂದ ಪ್ರತಿಯೊಬ್ಬರು ಎರಡು ಶಬ್ಧಗಳಲ್ಲಿ ನಿಮ್ಮ ಸಮಾಚಾರವನ್ನು ತಿಳಿಸಿರಿ ಹಾಗೂ ಆ ಅಂಚೆಪತ್ರದ ಮೇಲೆ ವಿಶೇಷವಾಗಿ ಏನು ಬರೆಯಬೇಕು ಎಂದರೆ ಇದು ನನ್ನ ಹೊಸ ವರ್ಷದ ಖಾತೆಯಾಗಿದೆ ಎಂದು. ಯಾರು ಅಂಚೆಯ ವಿಭಾಗದವರಿದ್ದಾರೋ ಅವರ ಬಳಿ ಎಲ್ಲಾ ಅಂಚೆಯ ಪತ್ರಗಳು ಒಟ್ಟಿಗೆ ಇರುತ್ತವೆ. ಅವರು ಅದನ್ನು ಪ್ರತ್ಯೇಕ ಮಾಡುತ್ತಾರೆ. ಅದರ ಕವರ್ ಮೇಲೆ "ಸ್ಥಿತಿಯ ಲೆಕ್ಕಾಚಾರ" ಎಂದು ಬರೆಯಿರಿ, 2 ತಿಂಗಳ ಸಮಯವು ಸಿಕ್ಕಿ ಬಿಟ್ಟಿದೆ ಹಾಗೂ ಪತ್ರದ ಒಳಗೆ ಏನು ಬರೆಯಬೇಕೆಂದರೆ ವ್ಯರ್ಥ ಸಂಕಲ್ಪಗಳು ಯಾವ ಪರ್ಸೆಂಟೇಜ್ ಅಲ್ಲ ತ್ಯಾಗವಾದವು. ಕೇವಲ ವ್ಯರ್ಥ ಸಂಕಲ್ಪ 50% ಅಥವಾ 100% ತ್ಯಜಿಸಲ್ಪಟ್ಟವು ಎಂದಷ್ಟೇ ಬರೆಯಿರಿ. ಒಂದೇ ಸಾಲಿನಲ್ಲಿ ಬರೆಯಿರಿ, ವಿಸ್ತಾರವಾಗಿ ಬರೆಯಬೇಡಿರಿ. ಯಾರು ವಿಸ್ತಾರ ಮಾಡಿ ಬರೆಯುತ್ತಾರೆಯೋ ಅವರ ಪತ್ರವನ್ನು ಮುಂಚಿತವಾಗಿಯೇ ಹರಿದು ಹಾಕಲಾಗುತ್ತದೆ. ಕೇವಲ ಒಂದು ಪಂಕ್ತಿಯಲ್ಲಿ ತಿಳಿಸಿದರೆ ಸಾಕು. ಅದಕ್ಕೆ ತಯಾರಾಗಿದ್ದೀರಾ? ಜೋರಾಗಿ ಹೇಳಿರಿ- ಆಗಲಿ ಬಾಬಾ ಅಥವಾ ಆಗುವುದಿಲ್ಲ ಬಾಬಾ ಎಂದು ಹೇಳಿರಿ. ಇದರಲ್ಲಿ ಧೈರ್ಯದ ಅಗತ್ಯವಿದೆ. ಸಮಯ ಬೇಕು ಎನ್ನುವವರು ಈಗಲೆ ಕೈ ಎತ್ತಿಬಿಟ್ಟರೆ ನಿಮಗೆ ಮುಂಚಿತವಾಗಿಯೇ ರಿಯಾಯಿತಿ ನೀಡಲಾಗುತ್ತದೆ. ಯಾರಾದರೂ ಅಂತಹವರು ಇದ್ದೀರಾ ಅಥವಾ ಆಮೇಲೆ ಬರೆಯುತ್ತೀರೋ - ಪುರುಷಾರ್ಥವನ್ನಂತೂ ತುಂಬಾ ಮಾಡಿದೆನು ಆದರೆ ಆಗಲಿಲ್ಲ ಎಂದು. ಹಾಗೆ ಮಾಡುವುದಿಲ್ಲ ತಾನೆ. ಹಾಗೆ ಬರೆಯುವುದಿಲ್ಲ ತಾನೆ ಪಕ್ಕಾ ಆಗಿದ್ದೀರಾ.

ಬಾಪ್‌ದಾದಾರವರು ನೋಡಿದರು ಪ್ರೀತಿ ಎಂಬುದು ಮಧುಬನದವರೆಗೆ ತಂದಿದೆ ಆದರೆ ಈ ಪ್ರೀತಿಯಿಂದಲೇ ಇನ್ನೆಲ್ಲಿಗೆ ತಲುಪಬೇಕು? ತಂದೆಯ ಸಮಾನರಾಗಬೇಕಲ್ಲವೇ? ಹೇಗಾದರೆ ಮಧುಬನಕ್ಕೆ ಓಡುತ್ತಾ, ಓಡುತ್ತಾ ಬಂದುಬಿಟ್ಟಿದ್ದೀರಲ್ಲವೇ, ನನ್ನ ಹೆಸರು ತಪ್ಪದೇ ಬರೆಯಿರಿ, ನನ್ನ ಹೆಸರು ತಪ್ಪದೇ ಬರೆಯಿರಿ ಎನ್ನುತ್ತೀರಿ. ಬರೆಯದಿದ್ದರೆ ಟೀಚರ್ನ ಮೇಲೆ ಕಣ್ಣು ಕೆಂಪಗೆ ಮಾಡುತ್ತೀರಿ. ಹೇಗಾದರೆ ಮಧುಬನಕ್ಕೆ ಪ್ರೀತಿಯಿಂದ ಓಡುತ್ತಾ ಬರುತ್ತೀರೋ ಹಾಗೆಯೇ

ತಂದೆಯ ಸಮಾನರಾಗುವುದರಲ್ಲಿ ನನ್ನ ಹೆಸರು ಮುಂದಿರಬೇಕು ಎಂಬ ಪುರುಷಾರ್ಥವನ್ನು ಮಾಡಿರಿ. ಪವಿತ್ರತೆಯ ಬುನಾದಿಯನ್ನು ಗಟ್ಟಿಯಾಗಿ ಮಾಡಿಕೊಳ್ಳಿರಿ. ಬ್ರಹ್ಮಾತಂದೆಗೆ ಪವಿತ್ರತೆಯ ಕಾರಣದಿಂದಲೇ, ಈ ನವೀನತೆಯ ಕಾರಣದಿಂದಲೇ ನಿಂದೆಗಳು ಕೂಡ ಬಂದವು ಆದ್ದರಿಂದ ಪವಿತ್ರತೆಯೇ ಬುನಾದಿ, ಬ್ರಹ್ಮಚರ್ಯ ವ್ರತ ಪಾಲಿಸುವುದು ಪವಿತ್ರತೆಯ ಸಾಧಾರಣ ವಿಷಯ ಆದರೆ ಈಗ ಇನ್ನೂ ಮುಂದಕ್ಕೆ ಹೋಗಬೇಕು. ಬಾಲ್ಯಸ್ಥಿತಿಯಲ್ಲ ಈಗ ವಾನಪ್ರಸ್ಥ ಸ್ಥಿತಿಗೆ ಹೋಗಬೇಕು. ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆ, ನನಗೆ ಪವಿತ್ರತೆ ಇದೆ ಎಂದು ಕೇವಲ ಇದರಿಂದ ಸಂತೋಷವಾಗಿ ಬಿಡಬೇಡಿರಿ. ಈಗ ದೃಷ್ಟಿ , ವೃತ್ತಿಯ ಪವಿತ್ರತೆಯ ಮೇಲೆ ಇನ್ನೂ ಹೆಚ್ಚು ಗಮನ (ಅಂಡರ್ ಲೈನ್) ವಿಡಿ. ಮುಖ್ಯ ಬುನಾದಿಯಾದ ನಿಮ್ಮ ಸಂಕಲ್ಪಗಳನ್ನು ಶುದ್ಧವಾಗಿ ಮಾಡಿಕೊಳ್ಳಿರಿ. ಜ್ಞಾನಸ್ವರೂಪವಾಗಿ, ಶಕ್ತಿ ಸ್ವರೂಪವಾಗಿ ತಯಾರು ಮಾಡಿಕೊಳ್ಳಿರಿ. ಏನು ಮಾಡುವುದು, ಮಾಡಲಾಗುತ್ತಿಲ್ಲ, ಏನಾಗುತ್ತಿದೆಯೋ ತಿಳಿಯುತ್ತಿಲ್ಲ, ಅರ್ಥಾತ್ ಇದು ಪವಿತ್ರತೆಯ ಶಕ್ತಿಯೇ? ಏನು ಮಾಡುವುದು, ಆಗಿ ಬಿಟ್ಟಿತು ಹಾಗೆ ಆಗುತ್ತಾ ಇರುತ್ತದೆ, ಆಗಬೇಕು ಎಂದುಕೊಳ್ಳುವುದಲ್ಲ ಆದರೆ..... ಹೀಗೆ ಪವಿತ್ರ ಆತ್ಮವಿರುತ್ತದೆಯೇ? ಹೀಗೆ ಎಂತಹ ಆತ್ಮ ಇರುತ್ತದೆ? ಹೀಗೆ ಪವಿತ್ರ ಆತ್ಮ ಹೇಳುತ್ತದೆಯೇ ಅಥವಾ ಬಲಿಹೀನ ಆತ್ಮ ಹೇಳುತ್ತದೆಯೇ? ತ್ರಿಕಾಲದರ್ಶಿ ಆತ್ಮರಲ್ಲವೇ? ಏಕೆ, ಏನು, ಎಂಬವರನ್ನು ಬಾಪ್‌ದಾದಾ ಜಿಜ್ಞಾಸುಗಳ ಹತ್ತಿರ ಕೂಡಿಸಿ ಎಂದು ಹೇಳುತ್ತಾರೆ. ಅವರಿಗೆ 84 ಜನ್ಮಗಳ ಚಿತ್ರದ ಬಗ್ಗೆ ಹೇಳುತ್ತಾರಲ್ಲವೇ, 84 ಜನ್ಮಗಳ ಬಗ್ಗೆ ತಿಳಿಸುತ್ತಾರೆ ಆದರೆ ಏನು, ಏಕೆ ಎಂದು ಹೇಳುತ್ತಿದ್ದೀರಾ? ಎಲ್ಲವೂ ತಿಳಿದಿರುವವರು ಏಕೆ, ಹೇಗೆ ಎಂದು ಕೇಳುತ್ತಾರೆಯೇ? ಇದು ಯಾವುದರ ಕಾರಣ ಆಗುತ್ತಿದೆ ಎಂದು ಅವರಿಗೆ ತಿಳಿದಿರುತ್ತದೆ ಅಲ್ಲವೇ? ಏನು ಎಂಬ ಪ್ರಶ್ನೆಗೆ ಸಮಾಧಾನ ಸ್ವಯಂ ಬುದ್ಧಿಯಲ್ಲಿ ಬಂದುಬಿಡುತ್ತದೆ. ನೀವು ಮಾಯೆಯ ಪ್ರಭಾವಕ್ಕೆ ಪರವಶವಾಗಿ ಇದ್ದೀರಿ ಎಂದು. ಅವರು ಮಹಾರಥಿಗಳಾದರೂ, ಕಾಲ್ದಳದವರಾದರೂ, ಮಹಾರಥಿಗಳಿಂದ ಕೂಡ ತಪ್ಪು ಆಗುತ್ತದೆ ಎಂದರೆ ಆ ಸಮಯದಲ್ಲಿ ಅವರು ಮಹಾರಥಿಯಲ್ಲ, ಪರವಶರು ಪರವಶವಾದವರು ಅಲೆಯಲ್ಲಿ ಹೊಡೆದಾಡುತ್ತಾರೆ. ಆದರೆ ಆ ಸಮಯದಲ್ಲಿ ಅವರು ಮಹಾರಥಿ ಅಲ್ಲ ಪರವಶರು ತಿಳಿಯಿತೇ? ಹೊಸ ವರ್ಷದಲ್ಲಿ ಏನು ಮಾಡಬೇಕು? ವ್ಯರ್ಥದ ಸಮಾಪ್ತಿಯ ಹೊಸ ಖಾತೆಯನ್ನು ಪ್ರಾರಂಭಿಸಬೇಕು. ಸರಿಯಾಗಿದೆ ತಾನೇ? ಮೊದಲು ಶಿಕ್ಷಕಿಯರು ಆಗಲಿ ಎಂದು ಹೇಳಿರಿ. ಪಕ್ಕಾ ಆಗಿದ್ದೀರಾ ಅಥವಾ ಯಾವುದಾದರೂ ಒಂದು ಕಾರಣವನ್ನು ಹೇಳುತ್ತೀರಾ ಇನ್ನು ಏನಾದರೂ ಕಾರಣಗಳಿದ್ದರೆ ಹೊಸ ಪ್ಲಾನನ್ನು ಹೇಳುತ್ತೇನೆ. ಈಗ ಹೇಳುವುದಿಲ್ಲ, ಈಗ ಹೇಳಿದರೆ ಮತ್ತೆ ನೀವು ಇನ್ನೊಂದು ಕಾರಣವನ್ನು ತೆಗೆಯುತ್ತೀರಿ, ಕಾರಣವಲ್ಲ, ನಿವಾರಣೆ ಮಾಡಬೇಕು, ಸಮಸ್ಯಾ ಸ್ವರೂಪರಲ್ಲ, ಸಮಾಧಾನ ಸ್ವರೂಪರಾಗಬೇಕು.

ಪ್ರಕೃತಿಯೂ ಸಹ ಈಗ ಬಳಲಿ ಹೋಗಿ ಬಿಟ್ಟಿದೆ. ಪ್ರಕೃತಿಯ ಶಕ್ತಿಯೆಲ್ಲವೂ ಈಗ ಸಮಾಪ್ತಿಯಾಗಿ ಬಿಟ್ಟಿದೆ. ಆದ್ದರಿಂದ ಪ್ರಕೃತಿಯು ಸಹ ಪ್ರಕೃತಿ ಪತಿಯರಾದ ನಿಮ್ಮನ್ನು ವಿನಂತಿಸಿಕೊಳ್ಳುತ್ತಿದೆ. ಈಗ ವೇಗವಾಗಿ ಮಾಡಿರಿ, ಆಲಸ್ಯ ಮಾಡಬೇಡಿರಿ ಎಂದು ಒಳ್ಳೆಯದು.

ಬಾಪ್‌ದಾದಾರವರು ಸಹ ತನುವನ್ನು ನಡೆಸಬೇಕಾಗುತ್ತದೆ (ಆದ್ದರಿಂದ ಕಾರ್ಯ ಮಾಡಿಸಬೇಕಾಗುತ್ತದೆ) ನಡೆದರೂ, ನಡೆಯದಿದ್ದರೂ ನಡೆಸಬೇಕಾಗುತ್ತದೆ. ಏಕೆಂದರೆ ತಂದೆಗೆ ಮಕ್ಕಳೆಂದರೆ ಪ್ರೀತಿ. ಆದ್ದರಿಂದ ಇಷ್ಟು ಪ್ರಿಯ

ಆತ್ಮರು ಬಂದಿರುವಾಗ ತಂದೆಯು ಆತ್ಮಿಕ ಮಾರ್ತಾಲಾಪ ಮಾಡದಿದ್ದರೆ ಹೇಗಾಗುತ್ತದೆ. ಆದ್ದರಿಂದ ಬಲವಂತದಿಂದಲಾದರೂ ನಡೆಸಬೇಕಾಗುತ್ತದೆ. ಒಳ್ಳೆಯದು, ಎಲ್ಲರೂ ಸಂತುಷ್ಟರಾಗಿದ್ದೀರಾ, ಎಲ್ಲರೂ ಖುಷಿಯಾಗಿದ್ದೀರಾ? ತಂದೆಯು ಮಿಲನ ಮಾಡಿದರು - ಸಂತುಷ್ಟರಾಗಿದ್ದೀರಲ್ಲವೆ? ಬಾಬಾ ಸಿಕ್ಕಿಬಿಟ್ಟಿದ್ದಾರೆ ಆದ್ದರಿಂದ ಅಸಂತುಷ್ಟರಾಗಿದ್ದಿರಾ?

**ನಾಲ್ಕೂ ಕಡೆಯ ಪದಮಗುಣ ಪ್ರೇಮಸ್ವರೂಪ ಆತ್ಮರಿಗೆ, ಸದಾ ಸ್ವಯಂ ಅನ್ನು, ನಿರ್ವಿಕಲ್ಪ ಮಾಡಿಕೊಳ್ಳುವ ವಿಶೇಷ ಆತ್ಮರಿಗೆ, ಸದಾ ತಂದೆಯ ಹಾಗೂ ನಿರ್ವಿಘ್ನ ಸೇವೆಯ ಸಂಬಂಧದಲ್ಲಿ ಮಗ್ನರಾಗಿರುವ ಆತ್ಮರಿಗೆ ಸದಾ ತಂದೆಯ ಸ್ನೇಹದಲ್ಲಿ ಬಲಿಯಾಗುವ ಎಲ್ಲಾ ಆತ್ಮರಿಗೂ ಬಾಪ್‌ದಾದಾರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದಾದಿಯರೊಂದಿಗೆ:** ನೋಡಿರಿ  ಆದಿರತ್ನಗಳಲ್ಲಿ ಸರ್ವರ ಪ್ರೀತಿಯು ಅಧಿಕವಾಗುತ್ತಾ ಹೋಗುತ್ತದೆ. ಆದಿ ರತ್ನಗಳು ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿದ್ದಾರೆ ಎನ್ನುವ ದೃಷ್ಟಿಯಿಂದ ಎಲ್ಲರೂ ನೋಡುತ್ತಾರೆ. ಹೀಗೆ ನಿಮ್ಮಲ್ಲಿ ಎಲ್ಲರ ಶುದ್ಧ ಮೋಹವು ಅಧಿಕವಾಗಿ ಬಿಟ್ಟಿದೆ. ಬಾಪ್‌ದಾದಾರವರು ಇವರಿಬ್ಬರ ಮೇಲೆಯೂ (ಚಂದ್ರಮಣಿ ದಾದಿ. ರತನ್‌ಮೋಹಿನಿ ದಾದಿ) ಖುಷಿಯಾಗಿದ್ದೇವೆ. ಜ್ಞಾನಸರೋವರದ ಜವಾಬ್ದಾರಿಯು ಜವಾಬ್ದಾರಿಯೇನು. ಆಟವಾಗಿದೆ. ಏನಾದರೂ ಭಾರೀತನವಿದೆಯೇ? ಆಟವು ಏನಾಗಿರುತ್ತದೆ? ಆಟವು ಹಗುರವಾಗಿರುತ್ತದೆಯಲ್ಲವೇ? ಆದ್ದರಿಂದ ಜವಾಬ್ದಾರಿಯು ಏನಿದೆ? ಆಟವಾಗಿದೆ. ಬಾಪ್‌ದಾದಾರವರು ಏಕೆ ಖುಷಿಯಾಗಿದ್ದೇವೆಂದರೆ, ಸಮಯದಲ್ಲಿ ಸಹಯೋಗಿಯಾಗಿದ್ದಾರೆ ಎಂದು ಹಾಗೂ ಆದಿಯಿಂದಲೂ ಸಹಯೋಗಿಯಾಗಿದ್ದಾರೆ. ಆದಿಯಿಂದ ಆಗಲಿ ಬಾಬಾ ಎಂದು ಹೇಳುವವರಾಗಿದ್ದಾರೆ. ಇದೇ ನಿಮ್ಮೆಲ್ಲರಿಗೂ ಸಾಕಾರ ತಂದೆಯ ವಿಶೇಷ ವರದಾನವಿದೆ. ಬ್ರಹ್ಮಾಬಾಬಾರಿಗೆ ಇಲ್ಲ. ಆಗುವುದಿಲ್ಲ ಎನ್ನುವ ಶಬ್ದವು ಎಂದೂ ಹಿತವೆನಿಸುವುದಿಲ್ಲ. ಇದಂತೂ ಗೊತ್ತಿದೆ. ಇವರು ಅನುಭವಿಯಾಗಿದ್ದಾರೆ.

ಈಶೂ ಸಹೋದರಿಯೊಂದಿಗೆ ಇವರು ಆದಿಯಿಂದ ಇಲ್ಲಿಯವರೆಗೆ ತುಂಬಾ ಉತ್ತಮ ಪಾತ್ರವನ್ನು ಅಭಿನಯಿಸಿದ್ದಾರೆ ಹಾಗೂ ನಿಮಗಂತೂ ವಿಶೇಷ ಸಹಯೋಗಿಯಾಗಿದ್ದಾಳೆ. ಯಾವುದೇ ವಿಚಾರವನ್ನು ತುಂಬಾ ಚೆನ್ನಾಗಿ ಕೇಳುವವಳು ಹಾಗೂ ಹೇಳುವವಳಾಗಿದ್ದಾಳೆ. ಏಕೆಂದರೆ ಗಂಭೀರವಾಗಿರುತ್ತಾಳೆ. ಈ ಮಾಡಿದೆನೆಂದು ತಿಳಿದುಕೊಳ್ಳಿರಿ, ಹಾಗೂ ಹೇಳಿಬಿಟ್ಟಿದ್ದರಿಂದ ಅರ್ಧ ಮುಗಿದು ಹೋಗಿ ಬಿಡುತ್ತದೆ. ಅರ್ಧ ಫಲವು ಮುಗಿದು ಹೋಗಿ ಬಿಟ್ಟಿತು. ಅರ್ಧ ಫಲವು ಜಮಾ ಆಗಿತು. ಹಾಗೂ ಯಾರದು ಪೂರ್ತಿ ಜಮಾ ಆಗುತ್ತದೆ. ಯಾರು ಗಂಭೀರವಾಗಿರುತ್ತಾರೋ ಅವರದು. ಜಗದಂಬಾ ಗಂಭೀರವಾಗಿದ್ದರು. ಸ್ಥೂಲದಲ್ಲಿ ಸೇವೆಯನ್ನು ನಿಮಗಿಗಲೂ ಕಡಿಮೆ ಮಾಡಿದ್ದಾರೆ ಎಂಬುದೇನೋ ನಿಜ. ನೀವು ಜಾಸ್ತಿ ಮಾಡುತ್ತಾ ಇದ್ದೀರಿ, ಆದರೆ ಈ ಗಾಂಭೀರ್ಯದ ಗುಣವು ಖಾತೆಯನ್ನು ಪೂರ್ತಿ ಜಮಾ ಮಾಡಿತು.

ರಿವೈಸ್ ಕೋರ್ಸ್ 07-11-1995.

***ಬಾಪ್‌ದಾದಾರವರಿಗೆ ವಿಶೇಷವಾಗಿ ಪ್ರಿಯವಾದುದು ಮತ್ತು ಜ್ಞಾನದ ಬುನಾದಿ - ಪವಿತ್ರತೆ.***

ಬ್ರಹ್ಮಾತಂದೆ ಮತ್ತು ಶಿವ ತಂದೆಗೆ ವಿಶೇಷವಾಗಿ ಇಷ್ಟವಾದುದು ಯಾವುದು? ಪವಿತ್ರತೆ, ಅಂತರ್ಮುಖತೆ, ನಿಶ್ಚಯ ಬುದ್ಧಿ, ಸ್ವಚ್ಛತೆ-ಸತ್ಯತೆ. ವಾಸ್ತವದಲ್ಲಿ ಬುನಾದಿ ಪವಿತ್ರತೆ ಆದರೆ ಪವಿತ್ರತೆಯ ಪರಿಭಾಷೆ ಬಹಳ ಗುಹ್ಯವಾದುದು. ಪವಿತ್ರತೆ ಎಲ್ಲಿರುತ್ತದೆಯೋ ಅಲ್ಲಿ ನಿಶ್ಚಯ, ಸತ್ಯತೆ, ಸ್ವಚ್ಛತೆ ಎಂದು ಹೇಳುತ್ತಿರುವ ಎಲ್ಲವೂ ಬಂದುಬಿಡುತ್ತವೆ. ಆದರೆ ಬಾಪ್‌ದಾದಾ ನೋಡುತ್ತಿದ್ದಾರೆ ಪವಿತ್ರತೆಯ ಗುಹ್ಯಭಾಷೆ, ಪವಿತ್ರತೆಯ ಗುಹ್ಯರಹಸ್ಯ, ಈಗ ಇನ್ನೂ ಬುದ್ಧಿಯಲ್ಲಿ ಸ್ಪಷ್ಟವಾಗಿ ಇಲ್ಲ. ವ್ಯರ್ಥ ಸಂಕಲ್ಪಗಳು ನಡೆಯುವುದು ಮತ್ತು ನಡೆಸುವುದು ಇವು ಸ್ವಯಂನಲ್ಲಿ ಕೂಡ ಬರುತ್ತಿವೆ, ಮತ್ತು ಇತರರಲ್ಲಿ ಕೂಡ ಉತ್ಪನ್ನವಾಗಲು ನಿಮಿತ್ತವಾಗುತ್ತಿದ್ದೀರಿ. ಈ ವ್ಯರ್ಥ ಸಂಕಲ್ಪಗಳು ಪವಿತ್ರತೆಯೇ? ಸಂಕಲ್ಪದ ಪವಿತ್ರತೆಯ ರಹಸ್ಯವನ್ನು ಎಲ್ಲರೂ ಪ್ರತ್ಯಕ್ಷದಲ್ಲಿ ತರಬೇಕಲ್ಲವೇ? ವ್ಯರ್ಥ ಸಂಕಲ್ಪಗಳಿಗೆ ಆಧಾರ ಅಭಿಮಾನ ಮತ್ತು ಅಪಮಾನ. ಇವುಗಳನ್ನು ಸಮಾಪ್ತಿ ಮಾಡಿದರೆ ತಂದೆಯ ಸಮಾನವಾಗುವುದು ಕಷ್ಟವಲ್ಲ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ತಂದೆಯನ್ನು ಜೊತೆಯಾಗಿ ಇಟ್ಟುಕೊಂಡಿರುವ ಮಾಯಾಜಿತ್ ಸ್ವರೂಪ.

2. ನಾನು ತಂದೆಯ ಪ್ರತಿ ಇರುವ ಪದಮಾಪದಂ ಪ್ರೀತಿಗೆ ಪ್ರಮಾಣವಾಗಿ ಸಮಾನವಾಗಿ ತಯಾರಾಗಿದ್ದೇನೆ.

3. ನಾನು ಬ್ರಹ್ಮಾತಂದೆ ಮತ್ತು ಶಿವತಂದೆಗೆ ವಿಶೇಷವಾಗಿ ಪ್ರಿಯವಾಗಿರುವ ಪವಿತ್ರತೆ, ಅಂತರ್ಮುಖತೆ, ನಿಶ್ಚಯ ಬುದ್ಧಿ, ಸ್ವಚ್ಛತೆ ಮತ್ತು ಸತ್ಯತೆಯ ಸ್ವರೂಪ.

4. ನಾನು ವ್ಯರ್ಥ ಸಂಕಲ್ಪಗಳಿಗೆ ಕಾರಣವಾದ ಅಪಮಾನ ಮತ್ತು ಅಭಿಮಾನವನ್ನು ಬಲಿಹಾರ ಮಾಡಿರುವ ಬಾಪ್ ಸಮಾನ ಸ್ವರೂಪ.

5. ನಾನು ಪವಿತ್ರತೆಯ ಸಾಧಾರಣ ವಿಷಯ, ಬಾಲ್ಯ ಸ್ಥಿತಿಯಾದ ಬ್ರಹ್ಮಚಾರಿಯಾಗಿಯೇ ಇರುವುದರೊಂದಿಗೆ, ವಾನಪ್ರಸ್ಥ ಸ್ಥಿತಿಯಾದ ದೃಷ್ಟಿ ಮತ್ತು ವೃತ್ತಿಯಿಂದ ಪವಿತ್ರವಾಗಿ ಇದ್ದೇನೆ ಮತ್ತು ನನ್ನ ಸಂಕಲ್ಪಗಳನ್ನು ಶುದ್ಧವಾಗಿ ಜ್ಞಾನ ಸ್ವರೂಪವಾಗಿ ಶಕ್ತಿ ಸ್ವರೂಪವಾಗಿ ತಯಾರು ಮಾಡಿಕೊಂಡಿದ್ದೇನೆ.

6. ನಾನು ಕಾರಣಗಳನ್ನು ನಿವಾರಣೆ ಮಾಡಿರುವ ಸಮಾಧಾನ ಸ್ವರೂಪ.